# IN THE COURT OF THE ADDL. SENIOR CIVIL JUDGE & JMFC., GUBBI

# **OS – 346/2024**

Witness present and duly sworn on :  07.01.2026.

Cross Examination: by Counsel for Defendant No.1 to 6 :

ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯ ಇದೆ.  ಪ್ರತಿವಾದಿಗಳ ನನ್ನ ಮನೆಯಿಂದ ಸುಮಾರು  3 ಕಿ.ಮೀ ದೂರದಲ್ಲಿ ಇರುತ್ತಾರೆ ಮತ್ತು ಅವರು  ಎಂ.ಎಂ. ಎ ಕಾವಲ್ ನಿವಾಸಿಗಳು. ಪ್ರತಿವಾದಿಗಳ ಕುಟುಂಬದಲ್ಲಿ 6 ಜನ ಇದ್ದಾರೆ. ಅವರ ತಾತ ರವರ ಮತ್ತು ಒಟ್ಟು ಕುಟುಂಬದ ಮಾಹಿತಿ ನನಗೆ  ಇಲ್ಲ.  ಮೂಲ  ಆಸ್ತಿಯ ಮಾಲೀಕರು  ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪಹಣಿಯಲ್ಲಿ ಇರುವ  ವ್ಯಕ್ತಿಯ ಬಗ್ಗೆ ಗೊತ್ತಿದೆ.  ಆಸ್ತಿಯ ಮೂಲ ಮಾಲೀಕರು  ನಾಗಪ್ಪ  ಎಂದರೆ ನನಗೆ ಗೊತ್ತಿಲ್ಲ.  ನಾಗಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.      ಅವರಿಗೆ ಹನುಮಂತಪ್ಪ,  ಗಂಗರಂಗಪ್ಪ , ಗಂಗಮ್ಮ, ನಾಗರತ್ನಮ್ಮ, ವರಲಕ್ಷ್ಮೀ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.   ಹನುಮಂತರಾಯಪ್ಪ ನವರಿಗೆ ಮೂರು ಜನ ಮಕ್ಕಳು.  ಅವರುಗಳು  ನಾಗೇಂದ್ರ, ಬಾಲಕೃಷ್ಣ,  ಕುಮಾರ್.  ಕುಮಾರ್, ನಾಗೇಂದ್ರ ರವರ ವಯಸ್ಸು ನನಗೆ ಗೊತ್ತಿಲ್ಲ.  ನಾಗೇಂದ್ರ, ಬಾಲಕೃಷ್ಣ,  ಕುಮಾರ್  ರವರ  ನಡುವೆ ನೊಂದಾಯಿತ ಪಾಲುಪಟ್ಟಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.  ಸಾಕ್ಷಿ ಮುಂದುವರೆದು ಮರಣ ಶಾಸನ ಆಗಿದೆ.    ನಾಗಪ್ಪ  ರವರ  ಮಗಳಾದ  ವರಲಕ್ಷ್ಮೀ ರವರ ಬಗ್ಗೆ  ನನಗೆ ಗೊತ್ತಿಲ್ಲ. ವರಲಕ್ಷ್ಮೀ ನನಗೆ ಗೊತ್ತಿದ್ದಾರೆ.  ಸದರಿ  ವರಲಕ್ಷ್ಮೀ ರವರು ಹಾಸಿಗೆ ಹಿಡಿದಿದ್ದಾರೆಂದರೆ ಸರಿಯಲ್ಲ.  ಕುಮಾರ್ ರವರನ್ನು ದಾವೆಯಲ್ಲಿ  ಮತ್ತು ಕರಾರು ಪತ್ರದಲ್ಲಿ ಸೇರಿಸಿಲ್ಲ ಎಂದರೆ ಅವರು ಕರಾರು ಪತ್ರದಲ್ಲಿ ಇರುವುದಿಲ್ಲ.   ಬಾಲಕೃಷ್ಣ ರವರಿಗೆ ಇಬ್ಬರು ಮಕ್ಕಳು. ಅವರು ಯೋಗಿಶ್ ಮತ್ತು ಆದಿತ್ಯ.  ಅವರು  ಏನೂ ಮಾಡುತ್ತಾರೆಂದು ನನಗೆ ಗೊತ್ತಿಲ್ಲ.  ಅವರ ವಿಧಾಭ್ಯಾಸದ ಮಾಹಿತಿ ನನಗೆ ಇಲ್ಲ.  ಆದಿತ್ಯ ರವರು ಬೆಂಗಳೂರಿನ  ಎಂ.ಎಸ್ ರಾಮಯ್ಯ ಕಾಲೇಜಿನಲ್ಲಿ ಇಂಜಿನಿಯರಿಂಗ್ ಓದುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ.  ಯೋಗಿಶ್ ರವರು ಊರಿನಲ್ಲಿ ಇರುತ್ತಾರೆಂದರೆ  ಸರಿ.

ವರಲಕ್ಷ್ಮೀ, ಯೋಗಿಶ್, ಆದಿತ್ಯ, ತಿಪ್ಪಮ್ಮ ರವರು ಕರಾರು ಪತ್ರ ಮಾಡುವ ಸಂದರ್ಭದಲ್ಲಿ ಇರಲಿಲ್ಲ ಮತ್ತು ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಹನುಮಂತರಾಯಪ್ಪ, ತಿಪ್ಪಮ್ಮ, ಯೋಗಿಶ್ ಆದಿತ್ಯ ರವರು ಕರಾರು ಪತ್ರದ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದ ಹಾಳೆಗಳನ್ನು ಬಾಲಕೃಷ್ಣ ರವರು ತಂದಿರುತ್ತಾರೆ. ಅಂತಹ ಹಾಳೆಯನ್ನು ಪಡೆದ ರಶೀದಿಯನ್ನು ಹಾಜರುಪಡಿಸಿದ್ದಿರಾ ಎಂದರೆ ನನ್ನ ಗಮನಕ್ಕೆ ಇರುವುದಿಲ್ಲ.

ನಾನು ವ್ಯವಸಾಯ ಮಾಡುತ್ತೇನೆ. ನಾನು ಪಿ.ಯು.ಸಿ ಓದಿದ್ದೇನೆ. ಕರಾರು ಪತ್ರದಲ್ಲಿ ಇರುವ ಷರಾ ವನ್ನು ನಾನು ಬರೆದಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಷರಾವನ್ನು ನಾನು ಬರೆದಿಲ್ಲ ಮತ್ತು ಅದರ ವಿಚಾರ ಗೊತ್ತಿಲ್ಲದೆ ಇದ್ದರು ಸಹ ಸುಳ್ಳು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ರೂ.5 ಲಕ್ಷ ಚೆಕ್ ಮೂಲಕ ಕೊಟ್ಟಿದ್ದಾರೆ. ಸದರಿ ಚೆಕ್ ಯಾವ ಬ್ಯಾಂಕ್ ನ ಚೆಕ್ ಎಂದು ನನಗೆ ಗೊತ್ತಿಲ್ಲ. ಚೆಕ್ ನ್ನು ಬಾಲಕೃಷ್ಣ ರವರಿಗೆ ಕೊಟ್ಟರು. ವ್ಯವಸಾಯದ ಅಭಿವೃದ್ದಿಗೆ ಸಾಲ ಪಡೆದಿರುವ ಕಾರಣ ಹಣದ ಭದ್ರತೆಗೆ ಚೆಕ್ ನೀಡಿರುತ್ತಾರೆಂದರೆ ಸರಿಯಲ್ಲ. ಬಾಲಕೃಷ್ಣ, ತಿಪ್ಪಮ್ಮ , ಯೋಗಿಶ್, ಆದಿತ್ಯ ರವರ ಸಹಿಗಳಲ್ಲಿ ವ್ಯತ್ಯಾಸ ಮತ್ತು ಬದಲಾವಣೆ ಇದೆ ಎಂದರೆ ಸರಿಯಲ್ಲ. ಅವರ ಹೆಸರು ಮತ್ತು ಸಹಿಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚೆಕ್ ನ್ನು ರವಿಶಂಕರ್ ರವರ ತುಮಕೂರಿನ ಗಾರ್ಡನ್ ರಸ್ತೆಯ ಕಛೇರಿಯಲ್ಲಿ ನೀಡಿರುತ್ತಾರೆ.

ರವಿಶಂಕರರ್ ರವರು ಎರಡು ಚೆಕ್ ಕೊಟ್ಟಿರುತ್ತಾರೆ ಮತ್ತು ಎರಡು RTGS ಮಾಡಿರುತ್ತಾರೆ. ಸದರಿ ಚೆಕ್ ಗಳನ್ನು ರವಿಶಂಕರ್ ರವರ ಕಛೇರಿಯಲ್ಲಿ ನೀಡಿರುತ್ತಾರೆ. ಚೆಕ್ ಗಳ ನಂಬರ್ ಮತ್ತು ದಿನಾಂಕ ನನಗೆ ಗೊತ್ತಿಲ್ಲ. ಸಾಲದ ಭದ್ರತೆಗೆ ಚೆಕ್‌ಗಳನ್ನು ನೀಡಿದ್ದು ಆಸ್ತಿಯ ಮಾರಾಟ ಆಗಿಲ್ಲ ಎಂದರೆ ಸರಿಯಲ್ಲ. ಬಾಲಕೃಷ್ಣ ರವರನ್ನು ಹೊರತುಪಡಿಸಿ ಬೇರೆ ಪ್ರತಿವಾದಿಗಳಿಗೆ ಹಣ ಸಂದಾಯ ಆಗಿಲ್ಲ ಮತ್ತು ಅವರು ವ್ಯವಹಾರಕ್ಕೆ ಸಂಭಂದಪಟ್ಟಿಲ್ಲ ಎಂದರೆ ಸರಿಯಲ್ಲ. ಜಮೀನು ಒಟ್ಟು 14 ಎಕರೆ 4 ಗುಂಟೆ ಇರುತ್ತದೆ. ದಾವಾ ಆಸ್ತಿಯು 12 ಎಕರೆ ಇದೆ ಎಂದರೆ ಕರಾರು ಆಗುವಾಗ ಪಹಣಿಯು 14 ಎಕರೆ 14 ಗುಂಟೆಗೆ ಇರುತ್ತದೆ. ಪಹಣಿಗಳಲ್ಲಿ ಜಂಟಿ ಸ್ವತ್ತು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಹಣಿಯಲ್ಲಿ ಇರುವ ವ್ಯಕ್ತಿಗಳು ಸಹಿ ಮಾಡಿದ್ದಾರೆ. ಸದರಿ ಜಮೀನು ಪೋಡಿಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೋಡಿ ಮತ್ತು ಸ್ಕೆಚ್ ಆದ ನಂತರ ನೊಂದಣಿ

ಮಾಡಿಕೊಟ್ಟಿರುತ್ತಾರೆ. ಕರಾರು ಪತ್ರದಲ್ಲಿ ಇರುವ ಸಹಿಗಳನ್ನು ಸೃಷ್ಟಿಸಿ ವಾದಿಯ ಜೊತೆ ಶಾಮಿಲಾಗಿ ದಾಖಲೆ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ವಾದಿಯು ನನಗೆ ಪರಿಚಯ ಇರುವ ಕಾರಣ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕರಾರು ಪತ್ರವನ್ನು ಪುಟ್ಟಲಿಂಗಯ್ಯ ರವರು ತುಮಕೂರಿನ ಉಪನೊಂದಣಾಧಿಕಾರಿ ಕಛೇರಿಯಲ್ಲಿ ತಯಾರು ಮಾಡಿರುತ್ತಾರೆ. ನಾವು ಮತ್ತು ಪುಟ್ಟಲಿಂಗಯ್ಯ ನವರು ಸೇರಿ ಸುಳ್ಳು ದಾಖಲೆ ಸೃಷ್ಟಿಸಿದ್ದೇವಂದರೆ ಸರಿಯಲ್ಲ. ಪುಟ್ಟಲಿಂಗಯ್ಯ ರವರ ಪರಿಚಯ ನನಗೆ ಇರುವುದಿಲ್ಲ. ನನಗೆ ವಿಚಾರ ಗೊತ್ತಿಲ್ಲದೆ ಇದ್ದರು ಸಹ ಸುಳ್ಳು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ತಿಮ್ಮಕ್ಕ ರವರ ಹೆಸರಿಗೆ ಜಂಟಿ ಪಹಣಿ ಬರುತ್ತಿದೆ ಎಂದರೆ ತಿಮ್ಮಕ್ಕ ರವರು ಪೌತಿ ಆಗಿರುತ್ತಾರೆ. ಪೋಡಿ ಮತ್ತು ಪ್ರತ್ಯೇಕ ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ಇನ್ನೊಬ್ಬ ಸಾಕ್ಷಿ ದಾರರಾದ ಸುಷ್ಮ ರವರ ಬಗ್ಗೆ ನನಗೆ ಗೊತ್ತಿಲ್ಲ. ಬೇರೆ ಪ್ರತಿವಾದಿಗಳು ವ್ಯವಹಾರಕ್ಕೆ ಸಂಭಂದ ಇಲ್ಲ ಎಂದರೆ ಸರಿಯಲ್ಲ. ಜಂಟಿ ಕುಟುಂಬದ ಆಸ್ತಿಯಾಗಿದ್ದ ಕಾರಣ ಒಬ್ಬರಿಗೆ ವ್ಯವಹಾರ ಮಾಡಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಊರಿನಿಂದ 3 ಕಿ.ಮೀ ದೂರದಲ್ಲಿ ಇದೆ. ವಿಲ್ ನ ಪ್ರೊಬೆಟ್ ವಿಚಾರ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಎಸ್.ಎಸ್ ಬಿಂದು ಮತ್ತು ಬೇರೆಯವರ ಜಮೀನು ಇರುತ್ತದೆ. ಸದರಿ ಎಸ್.ಎಸ್ ಬಿಂದು ರವಿಶಂಕರ್ ರವರ ಮಗಳು ಎಂದರೆ ಸರಿಯಲ್ಲ. ಅವರು ರವಿಶಂಕರ್ ರವರ ಹೆಂಡತಿ. ಬಿಂದು ರವರ ಹೆಸರಿಗೆ 5 ಎಕರೆ ಜಮೀನು ಇದೆ ಎಂದರೆ ಸರಿ. ದಾವಾ ಆಸ್ತಿಯನ್ನು ಕಬಳಿಸಲು ಸುಳ್ಳು ಕರಾರು ಪತ್ರವನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ತುಮಕೂರಿನಿಂದ ಸುಮಾರು 14-15 ಕಿ.ಮೀ ದೂರದಲ್ಲಿ ಇದೆ. ಅದು ತುಮಕೂರಿನ ಮಹಾನಗರ ಪಾಲಿಕೆಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ 1 ಗುಂಟೆಗೆ ರೂ.4-5 ಲಕ್ಷ ಮೌಲ್ಯ ಇದೆ ಎಂದರೆ ಸರಿಯಲ್ಲ. ನನಗೆ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi